**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ. ನಂ.188/2022

ಸಿಡಬ್ಲೂಃ 07 ಪಿಡಬ್ಲ್ಯೂ ಃ 03

ಪ್ರಮಾಣವಚನ ಭೋಧಿಸಲಾಯಿತು. ದಿಃ 03.05.2025.

| | |
|---|---|
| ಹೆಸರು | : ಶ್ರೀ. ಪ್ರಕಾಶ ಕುಲಕರ್ಣಿ |
| ತಂ/ಗಂ ಹೆಸರು | : ಶ್ರೀ. ಕೃಷ್ಣಜೀ |
| ವಯಸ್ಸು | : 65 ವರ್ಷ |
| ಉದ್ಯೊಗ | : ನಿವೃತ್ತ ಎಎಸ್‌ಐ. |
| ವಾಸಸ್ಥಳ | : ಕಲಬುರಗಿ. |

**ಮುಖ್ಯ ವಿಚಾರಣೆಃ** ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ನಾನು 2013 ರಿಂದ 2018 ರವರೆಗೆ ಡಿಸಿಐಬಿಯಲ್ಲಿ ಪೊಲೀಸ್ ಮುಖ್ಯ ಪೇದೆ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.10.2015 ರಂದು ನಾನು ಡಿಸಿಐಬಿ ಘಟಕದಲ್ಲಿ ಇದ್ದಾಗ ಸದರಿ ಡಿಸಿಬಿ ಘಟಕದ ಚಾಸಾ-1 ರವರು ತಮಗೆ ಒಂದು ಬಾತ್ಮಿ ಬಂದಿದ್ದು, ಆ ಪ್ರಕಾರ ಮಾದನಹಿಪ್ಪರಗಾ ಗ್ರಾಮದ ವಿವೇಕಾನಂದ ಸರ್ಕಲ್ ಕೆಎಬಿ ಕಛೇರಿ ಹತ್ತಿರ ಅಕ್ರಮವಾಗಿ ಮರಳು ದಾಸ್ತಾನು ಮಾಡಿರುತ್ತಾರೆ ಎಂದು ಮಾಹಿತಿ ಬಂದಿದ್ದು. ಆ ಪ್ರಕಾರ ನನಗೆ ಮತ್ತು ಚಾಸಾ-8, ಚಾಸಾ-5 ರವರಿಗೆ ಹೇಳಿ ಬರಬೇಕು ಎಂದು ಕೋರಿರುತ್ತಾರೆ. ನಾವು ರಾತ್ರಿ 2.00 ಗಂಟೆಗೆ ದಿಃ 30.10.2015 ರಂದು ನಾವು ಮತ್ತು ಚಾಸಾ-1, 4 ರಿಂದ 6 ರವರು ಕೂಡಿಕೊಂಡು ನಮ್ಮ ಸರ್ಕಾರಿ ಜೀಪ್ ನಂ.ಕೆಎ-32-699ರಲ್ಲಿ ಚಾಸಾ-9 ರವರು ಜೀಪ್‌ನ್ನು ಚಾಲನೆ ಮಾಡುತ್ತಿದ್ದರು. ಆಗ ನಾವೆಲ್ಲರು ಸೇರಿ ಸದರಿ ಗ್ರಾಮದ ಹನುಮಾನ ಗುಡಿಯ ಹತ್ತಿರ 4.00 ಗಂಟೆಗೆ ಬಂದಿರುತ್ತೇವೆ. ಸದರಿ ಗುಡಿಯಲ್ಲಿ ಮಲಗಿಕೊಂಡಿರುವ ಇಬ್ಬರು ಅಂದರೆ ಚಾಸಾ-2 ಮತ್ತು 3 ರವರನ್ನು ಎಬ್ಬಿಸಿರುತ್ತೇವೆ. ನಂತರ ನಾವು ಅವರಿಗೆ ಬಂದ ವಿಷಯವನ್ನು ತಿಳಿಸಿರುತ್ತೇವೆ. ನಂತರ ನಾವು ಮತ್ತು ಅವರು ಸೇರಿಕೊಂಡು ಸದರಿ ಸರ್ಕಲ್ ಬಳಿ ರೋಡ್ ಮೇಲೆ ನಿಂತಾಗ ಒಂದು ಕಂದು ಬಣ್ಣ ಲಾರಿ

ನಂ.ಕೆಎ-32 ಎ-8704 ಲಾರಿ ಬಂದಿರುತ್ತದೆ. ಆಗ ನಾವು ಮತ್ತು ನಮ್ಮ ಮೇಲಾಧಿಕಾರಿಗಳು ಪರಿಶೀಲಿಸಿದಾಗ, ಆಗ ನಾವು ಚಾಲಕನ ಹೆಸರು ಕೇಳಿದಾಗ ಪ್ರಕಾಶ ಕೋಟಕರ ಅಂತ ಹೇಳಿರುತ್ತಾರೆ ಹಾಗೂ ಆತನ ಬೈಯಾಜಿ ಜಿಜಗೆ ಇದ್ದರು. ಸದರಿ ಲಾರಿ ಮರಳು ತುಂಬಿತ್ತು, ಆ ಬಗ್ಗೆ ದಾಖಲಾತಿ ಕೇಳಿದಾಗ ಏನು ಇರುವುದಿಲ್ಲ ಎಂದು ಹೇಳಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸದರಿ ಲಾರಿ ಅಂದಾಜು ಕಿಮ್ಮತ್ತು ರೂ.4 ಲಕ್ಷ ಇರುತ್ತದೆ. ಮತ್ತು ಅದರಲ್ಲಿ ತುಂಬಿದ ಮರಳಿನ ಕಿಮ್ಮತ್ತು ರೂ.25,000/- ಇರುತ್ತದೆ. ನಂತರ ಸದರಿ ಇಬ್ಬರನ್ನು ನಮ್ಮ ಸುರ್ಪದಿಗೆ ಪಡೆದುಕೊಂಡು ಕೆಇಬಿ ಕಛೇರಿಯ ಹಿಂದುಗಡೆ ಹೋಗಿರುತ್ತೇವೆ. ಆಗ ಅಲ್ಲಿ ಖುಲ್ಲಾ ಜಾಗೆಯಲ್ಲಿ ಒಂದು ಜೆಸಿಬಿ ಹಳದಿ ಬಣ್ಣದ ವಾಹನ ಲಾರಿಯಲ್ಲಿ ಮರಳು ತುಂಬಲು ಹತ್ತಿತ್ತು. ಸದರಿ ಲಾರಿ ನಂ. ಕೆಎ-32-6894 ಆಗಿರುತ್ತದೆ. ಅದೇ ರೀತಿ ಸದರಿ ಲಾರಿ ಚಾಲಕನ ಹೆಸರು ಮಲ್ಲೇಶಪ್ಪ ತಂದೆ ಲಾಲಪ್ಪ ಇರುತ್ತದೆ. ಆತನ ಜೊತೆ ಇನ್ನೊಬ್ಬ ಇದ್ದ ಆತನ ಹೆಸರು ಭರಮಣ್ಣ ಮಣ್ಣಿಕೋಳ ಇರುತ್ತದೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. ನಂತರ ನಾವು ಪರಿಶೀಲನೆ ಮಾಡಿದ ನಂತರ ಸ್ಥಳದಲ್ಲಿ ಸುಮಾರು 15 ಲಾರಿಯಷ್ಟು ಮರಳು ದಾಸ್ತಾನು ಮಾಡಲಾಗಿತ್ತು, ಅದರ ಅಂದಾಜು ರೂ.3,75,000/- ಇರುತ್ತದೆ. ನಂತರ ಪಂಚರ ಸಮಕ್ಷಮ 6.30 ರಿಂದ 7.30 ಗಂಟೆಯವರೆಗೂ ಜಪ್ತಿ ಪಂಚನಾಮೆ ಮಾಡಿ, ನಂತರ ಪೊಲೀಸ್ ಠಾಣೆಗೆ ಬಂದು ಪ್ರಕರಣದ ದಾಖಲಿಸಿರುತ್ತೇವೆ. ಸಾಕ್ಷಿ ಜೆಸಿಬಿ ಮತ್ತು ಲಾರಿಗಳ ಒಟ್ಟು 10 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 11 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** <u>ಆರೋಪಿಗಳ ಪರ ವಕೀಲರಿಂದಃ</u>

ನಾವು ಎಲ್ಲರು ಕೂಡಿ ಬರುವ ಕಾಲಕ್ಕೆ ಒಟ್ಟು 5 ಜನ ಬಂದಿರುತ್ತೇವೆ. ಚಾಸಾ-1 ರವರು ನಮಗೆ ಬಾತ್ಮಿ ಬಂದ ವಿಷಯ ನಮಗೆ ಹೇಳುವ ಕಾಲಕ್ಕೆ ನಾವು ಕಛೇರಿಯಲ್ಲ್ ಇದ್ದೇವು. ನಾವು ಮಾದನಹಿಪ್ಪರಗಾ ಗ್ರಾಮಕ್ಕೆ ಆಳಂದ ಮಾರ್ಗವಾಗಿ ಹೋಗಿರುತ್ತೇವೆ. ನಾವು ಹನುಮಾನ ಗುಡಿಗೆ ಹೋದಾಗ ಅಲ್ಲಿ ತುಂಬಾ ಜನರು ಮಲಗಿಕೊಂಡಿದ್ದರು. ನಾವು ಎಬ್ಬಿದ ಇಬ್ಬರು ಅಂದರೆ ಚಾಸಾ-2

ಮತ್ತು 3 ರವರು ನಮಗೆ ಮೊದಲಿನಿಂದಲೂ ಪರಿಚಯ ಇರಲಿಲ್ಲ. ಸದರಿ ಇಬ್ಬರನ್ನು ಯಾರು ಎಬ್ಬಿಸಿರುತ್ತಾರೆ ಎಂದು ನನಗೆ ನೆನಪು ಇಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳ ಪೈಕಿ ಯಾವ ಆರೋಪಿ ಇಲ್ಲ ಎಂದು ನನಗೆ ಗೊತ್ತಾಗುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳ ಎಲ್ಲರ ಹೆಸರುಗಳನ್ನು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಕೆಇಬಿ ಹಿಂದುಗಡೆ ಹೋದಾಗ ಅಲ್ಲಿ ಮರಳು ದಾಸ್ತಾನು ಮಾಡಿದ ಜಾಗ ಸಮತಾ ಸಹಕಾರ ಸಂಘದ ಜಾಗವಾಗಿದ್ದು, ಅದು ಬಸವರಾಜ ಸಿಂಗೆ ಮತ್ತು ಗಂಗಾರಾಮ ಗಾಯಕವಾಡ ರವರಿಗೆ ಸಂಬಂಧಪಟ್ಟಿದ್ದು ಆಗಿತ್ತು. ಸದರಿ ಜಾಗ ಪರಿಶಿಷ್ಟ ಜಾತಿ ಸಮತಾ ಕೈಗಾರಿಕಾ ಮತ್ತು ವಿದ್ಯುತ್ ಚಾಲಿತ ನೇಕಾರ ಸಹಕಾರ ಸಂಘ ಇದರ ಜಾಗವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರ ಅಧ್ಯಕ್ಷರು ಬಸಣ್ಣ ಸಿಂಗೆ ಎಂದರೆ ಇರಬಹುದು ಸಾಕ್ಷಿ ಗಂಗಾರಾಮ ಗಾಯಕವಾಡ ಕೂಡಾ ಇರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಬಸವರಾಜ ಸಿಂಗೆ ರವರು ವಕೀಲರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಸವರಾಜ ಸಿಂಗೆ ರವರ ಶಿಕ್ಷಣ ಸಂಸ್ಥೆ ಮತ್ತು ಮೇಲೆ ಹೇಳಿದ ಸಂಘ ಹಾಗೂ ಸೊಸೈಟಿಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ನಾನು ಸದರಿ ಮರಳು ದಾಸ್ತಾನು ಮಾಡಿದ ಮಾಲಿಕರನ್ನು ಕುರಿತು ವಿಚಾರಣೆ ಮಾಡಿಲ್ಲ. ನಾನು ಸದರಿ ಜಾಗದ ಮಾಲಿಕರನ್ನು ಗುರುತಿಸಲು ಸಾಧ್ಯವಿಲ್ಲ. ಅವರು ಈ ದಿನ ನ್ಯಾಯಾಲಯದಲ್ಲಿ ಇರುತ್ತಾರೆ ಎಂದರೆ, ನನಗೆ ಗುರುತಿಸಲು ಸಾಧ್ಯವಿಲ್ಲ. ನಮ್ಮ ಮೇಲಾಧಿಕಾರಿಗಳು ನಮ್ಮನ್ನು ಕರೆದುಕೊಂಡ ನಿಮಿತ್ಯ ನಾವು ಹೋಗಿರುತ್ತೇವೆ ಎಂದರೆ ಸರಿ. ಅಂಕಿ ಅಂಶ ಸಲುವಾಗಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಶಿಕ್ಷಣ ಸಂಸ್ಥೆಯನ್ನು ಕಟ್ಟಿಸುವ ಸಲುವಾಗಿ 8ನೇ ಆರೋಪಿ ಮರಳು ಅಭಾವ ಆಗುತ್ತದೆ ಎಂಬ ಉದ್ದೇಶದಿಂದ ಸದರಿ ಮರಳನ್ನು ನೋಂದಾಯಿತ ರಾಯಲಿಟಿ ಮುಖಾಂತರ ತರೆಯಿಸಿದ್ದರೂ ಕೂಡಾ, ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಸಂಸ್ಥೆಯ ಮುಖ್ಯಸ್ಥರಿಗೆ ಮರಳು ಬಗ್ಗೆ ಕಾನೂನು ಬದ್ಧ ದಾಖಲೆಗಳು ಇರುತ್ತವೋ ಇಲ್ಲವೋ ಎಂಬುವುದರ ಬಗ್ಗೆ ನಾನು ಕೇಳಿಲ್ಲ. ನಾನು ದಾಖಲೆಗಳ ಬಗ್ಗೆ ನನ್ನ ಮೇಲಾಧಿಕಾರಿಗಳನ್ನು ಕೂಡಾ ವಿಚಾರಣೆ ಮಾಡಿಲ್ಲ. ನಾವು ಯಾವುದೇ ರೀತಿ ದಾಳಿಗೆ ಹೋಗಿಲ್ಲ,

ಮರಳು ಮತ್ತು ಲಾರಿ ಹಾಗೂ ಜೆಸಿಬಿಯನ್ನು ಅಮಾನತ್ ಪಡಿಸಿಕೊಂಡಿಲ್ಲ, ಕಛೇರಿಯಲ್ಲಿ ಕುಳಿತು ನಿಪಿ-1ನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ನ್ಯಾಯಾಲಯ, ಆಳಂದ.